ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **14 /2023**

| | | |
|---|---|---|
| ಸಾಕ್ಷಿಯ ಹೆಸರು | : ಸದಾಶಿವ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಗಣೇಶ | ಪಿ.ಡಬ್ಲ್ಯು 4 |
| ವಯಸ್ಸು | : 35 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸ ಸ್ಥಳ | : ಗಂಟೆ ಕಣಿವೆ | |

ದಿನಾಂಕಃ**28-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಚಾಸಾ-2 ರಿಂದ 7 ರವರ ಪರಿಚಯ ಇರುತ್ತದೆ. ಆರೋಪಿಗಳು ನನ್ನ ಸಂಬಂಧಿಕರು ಇರುತ್ತಾರೆ. 2022 ನೇ ಸಾಲಿನಲ್ಲಿ ಒಂದು ದಿವಸ ನಾನು ನಮ್ಮ ತೋಟಕ್ಕೆ ಎಳನೀರು ಕೀಳಿಸಲು ಹೋಗಿದ್ದೆ. ನನ್ನ ಜೊತೆ ಚಾಸಾ-4 ರಿಂದ 7 ಕೂಡ ಬಂದಿದ್ದರು. ನಾವು ತೋಟಕ್ಕೆ ಹೋದಾಗ ಆರೋಪಿತರು ಅಲ್ಲಿಗೆ ಬಂದು ನನ್ನ ಜೊತೆ ಜಗಳ ತೆಗೆದು, ಅವಾಚ್ಯವಾಗಿ ಬೈದರು. ಆ ಪೈಕಿ 1 ನೇ ಆರೋಪಿ ರಾಡಿನಿಂದ ನನ್ನ ಎಡ ಹುಬ್ಬಿನ ಹತ್ತಿರ ಹೊಡೆದಿರುತ್ತಾನೆ. ನನಗೆ ರಕ್ತಗಾಯ ಆಯಿತು. ಉಳಿದ ಸಾಕ್ಷಿದಾರರು ಜಗಳವನ್ನುಬಿಡಿಸಿದರು. ನಾನು ತರೀಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಮೆಗ್ಗಾನ್ ಆಸ್ಪತ್ರೆಗೆ ಹೋಗಿದ್ದೇನೆ. ನಾವು ಎಳನೀರು ಕೀಳಲು ಹೋಗಿದ್ದ ಜಮೀನು ಸರಸ್ವತಿ ಎಂಬುವವರಿಗೆ ಸೇರಿದೆ. ಘಟನೆ ನಡೆದ ದಿನ ನಾನೇ ಪಿರ್ಯಾದಿ ಕೊಟ್ಟಿರುತ್ತೇನೆ. ದೂರನ್ನು ನಿ.ಪಿ-3, ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರಿಗೆ ಬಂದಾಗ ನಿ.ಪಿ-1 ಕ್ಕೆ ನಾನು ಸಹಿ ಮಾಡಿರುತ್ತೇನೆ ಮತ್ತು ಸ್ಥಳವನ್ನು ನಾನೇ ತೋರಿಸಿದ್ದೇನೆ. ಸಾಕ್ಷಿಯ ಸಹಿಯನ್ನು ನಿ.ಪಿ-1(ಸಿ) ಎಂದು ಗುರುತಿಸಲಾಯಿತು. ನಿ.ಪಿ-2 ಭಾವ ಚಿತ್ರದಲ್ಲಿ ನಾನು ಇದ್ದೇನೆ. ಮು.ಮಾ-1 ನ್ನು ನೋಡಿ ಗುರುತಿಸುತ್ತೇನೆ. ಪೋಲೀಸರಿಗೆ ಮರು ಹೇಳಿಕೆ ಕೂಡ ಕೊಟ್ಟಿದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಹೇಳಿದ ಜಮೀನಿನ ಕುರಿತು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಚಾಲ್ತಿಯಲ್ಲಿದೆ ಎಂದರೆ ಸರಿ. ಈ ಜಮೀನಿನ ವಿಷಯವಾಗಿ ನನ್ನ ಮತ್ತು ಆರೋಪಿತರ ನಡುವೆ ಸಂಬಧಗಳು ಚೆನ್ನಾಗಿಲ್ಲ ಎಂದರೆ ಸರಿ. ನಾನು ಚಾಸಾ-4 ಚೆನ್ನಾಗಿ ಇದ್ದೇವೆ ಎಂದರೆ ಸರಿ. ಇಬ್ಬರ ನಡುವೆ ಯಾವುದೇ ಮನಸ್ತಾಪಗಳು ಇಲ್ಲ ಎಂದರೆ ಸರಿ. ನಾನು ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ, ಆರೋಪಿತರು ನನಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಅಥವಾ ಬೈದಿರುವುದಿಲ್ಲ

ಎಂದರೆ ಸರಿಯಲ್ಲ, ಸಿವಿಲ್ ವ್ಯಾಜ್ಯ ಚಾಲ್ತಿಯಲ್ಲಿ ಇರುವ ಕಾರಣ ಆರೋಪಿಗಳ ಮೇಲಿನ ದ್ವೇಷದಿಂದ ಸುಳ್ಳು ಪಿರ್ಯಾದಿಯನ್ನು ಕೊಟ್ಟು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹೊಡೆ-ಬಡಿ ಮಾಡಿಲ್ಲ ಮತ್ತು ಬೈದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಆರೋಪಿತರು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ ಹಲ್ಲೆ ಮಾಡಿದ್ದಲ್ಲಿ ದೊಡ್ಡ ಪ್ರಮಾಣದ ಗಾಯ ಆಗುತ್ತಿತ್ತು ಎಂದರೆ ಸರಿಯಲ್ಲ. ಮುಮಾ-1 ಕ್ಕೂ ಮತ್ತು ಈ ಪ್ರಕರಣಕ್ಕೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.